# ಕರ್ಮಯೋಗಿ

ಎಸ್.ಎಸ್.ಕುಮಾರಿ

ಕರ್ಮನಿಷ್ಠೆ, ಕರ್ತವ್ಯಪರಿಪಾಲನೆ ಮತ್ತು ಕಾರ್ಯದಕ್ಷತೆ ಇವುಗಳ ಮೂರ್ತರೂಪದಂತಿದ್ದ ವ್ಯಕ್ತಿಯೊಬ್ಬರ ಜೀವನಘಟನೆಯನ್ನು ಮಾರ್ಮಿಕವಾಗಿ ನಿರೂಪಿಸಿರುವ ಮಾನ್ಯ ಕುಮಾರಿಯವರು ಬೆಂಗಳೂರಿನಲ್ಲಿ ಅಡ್ವೊಕೇಟ್ ಆಗಿರುವರು ಮತ್ತು ರಾಮಕೃಷ್ಣ ಆಶ್ರಮದ ಭಕ್ತರಾಗಿರುವರು.

ನನ್ನ ವಕೀಲಿ ವೃತ್ತಿಯ ಆರಂಭದ ದಿನಗಳಲ್ಲಿ ಇಂದಿನಂತೆ ಹೆಚ್ಚು ಕೆಲಸದ ಒತ್ತಡ ಇರಲಿಲ್ಲ. ಕೆಲಸವು ಬೇಗನೆ ಮುಗಿದು ಸ್ವಲ್ಪ ಕಾಲಾವಕಾಶವಿರುತ್ತಿತ್ತು. ೩-೪ ಜನ ಹಿರಿಯ ವಕೀಲರ ವ್ಯಕ್ತಿತ್ವವು ನನ್ನ ಮನಸ್ಸನ್ನು ಬಹಳವಾಗಿ ಆಕರ್ಷಿಸಿತ್ತು. ಬಿಡುವಿನ ವೇಳೆಯಲ್ಲಿ ಅವರ ಸಂವಾದವಿರುವ ನ್ಯಾಯಾಂಗಣಕ್ಕೆ ಹೋಗಿ ಕೇಳು ಪುದು ವಾಡಿಕೆಯಾಗಿತ್ತು. ಅವರಲ್ಲಿ ಒಬ್ಬರಂತೂ ನನ್ನ ಆರಾಧ್ಯ.

ತನುಮನಗಳಿಂದ ಎತ್ತರವಾದ ನಿಲುವು, ಅಜಾನುಬಾಹು, ಶುಭ್ರ ಗೌರವ ವರ್ಣ. ಶುಭ್ರ ಶ್ವೇತ ಜರಿಯ ಅಂಚಿನ ಮೈಸೂರು ಪೇಟಾ, ಶುಭ್ರವಾದ ಕಚ್ಚೆಪಂಚೆ, ಊರ್ಧ್ವ ತ್ರಿಪುಂಡ್ರ. ಮಿರಮಿರನೆ ಹೊಳೆ ಯುವ ಕರಿಕೋಟಿಗೆ ಚಿನ್ನದ ಚೈನಿನ ಗುಂಡಿಗಳು. ಶುಭ್ರವಾದ ವಕೀಲ ಲಾಂಛನ, ಈ ಸ್ವರೂಪವನ್ನು ಸಂಪೂರ್ಣವಾಗಿ ತನ್ನದಾಗಿಸಿ ಅಪ್ಪುವ ಕಪ್ಪು ಗೌನು, ದೃಢವಾದ ಊರುಗೋಲು, ಕಂಡವರ ಕಾಲುಗಳು ಕೀಲಿಸಿ, ಹತ್ತು ಮಾರು ದೂರದಿಂದಲೇ ತಲೆ ಬಾಗಿಸುವ ವ್ಯಕ್ತಿತ್ವ. ನ್ಯಾಯಾಲಯವನ್ನೇ ನಡುಗಿಸುವ ಧೈರ್ಯ, ನ್ಯಾಯಾಧೀಶ ಪದವಿಯನ್ನೇ ತಿರಸ್ಕರಿಸಿದ ತ್ಯಾಗ ಅವರದು. ವಯೋವೃದ್ಧ, ಜ್ಞಾನ ವೃದ್ಧ, ಅನುಭವ ವೃದ್ಧ. ಪರಾಪರವಿದ್ಯೆಗಳನ್ನು ಏಕಕಾಲದಲ್ಲಿಯೇ ಅರೆದು ಕುಡಿದ ಮಹಾನ್ ಮೇಧಾವಿ. ಸಂಸ್ಕೃತದ ಪ್ರಕಾಂಡ ಪಂಡಿತ, ಸಂಸ್ಕೃತಿಯ ಸಾಕಾರಮೂರ್ತಿ.

ಅಂದು ನಮ್ಮ ಆಗಮನದ ಅವರ ನಿರ್ಗಮನದ ಸಂಧಿಕಾಲ. ಕಾಲನ ದವಡೆಗೆ ಮಾರ್ದವತೆ ಇದೆಯೇ? ಸಮಷ್ಟಿಯಲ್ಲಿ ಏನೇ ಸೃಷ್ಟಿಗೊಂಡರೂ ಅದು ಕಾಲಗ್ರಾಸವಾಗಲೇಬೇಕು. ಧೃತರಾಷ್ಟ್ರನು ಭೀಮನ ಕಂಚಿನ ವಿಗ್ರಹವನ್ನು ಪುಡಿಪುಡಿಗೈದಂತೆ ಕಾಲವು ಅವರ ದೇಹವನ್ನು ತನ್ನ ದವಡೆಯಲ್ಲಿ ಮಸೆಯುತ್ತಿತ್ತು. ದಿನಕಳೆದಂತೆ ಪರಿಪಕ್ವವಾಗಿ ಕಳಿತ ಹಣ್ಣಿನಂತೆ ಅವರ ದೇಹೇಂದ್ರಿಯಗಳು ಜೀರ್ಣ ವಾಗತೊಡಗಿದ್ದವು. ಇಷ್ಟಾದರೂ ಅವರು ಛಳಿ, ಮಳೆ, ಗಾಳಿ, ಬಿಸಿಲು ಎನ್ನದೆ ಎಂತಹ ಕಠಿಣ ಪ್ರಸಂಗದಲ್ಲಿಯೂ ಕೋರ್ಟಿಗೆ ಹಾಜರಾಗು ವುದು ತಪ್ಪುತ್ತಿರಲಿಲ್ಲ. ಅವರು ಎದುರಿಗೆ ಕಂಡಾಗಲೆಲ್ಲಾ "ಈ ಇಳಿ ವಯಸ್ಸಿನಲ್ಲಿ, ಅಸಹಾಯಕ ಸ್ಥಿತಿಯಲ್ಲಿ ಇವರೇಕಾದರೂ ಕೋರ್ಟಿಗೆ ಬರುವರೊ?" ಎಂಬ ಪ್ರಶ್ನೆ ಮನದಲ್ಲಿ ಮೂಡುತ್ತಿತ್ತು.

ಮನುಷ್ಯನು ದುಡಿಯುವುದು ಗಳಿಕೆಗಾಗಿ. ನನ್ನ ಅಲ್ಪ ಮತಿ ಯಂತೆ, ದುಡಿಮೆಯಲ್ಲಿ ಮೂರು ವಿಧ: ಅನಿವಾರ್ಯ, ಆವಶ್ಯಕತೆ ಮತ್ತು ಅಂಧತೆ. ಜೀವನದ ನಿರ್ವಹಣೆಗಾಗಿ ಗಂಜಿಗೂ ಗತಿಯಿಲ್ಲದ ವ್ಯಕ್ತಿ ದುಡಿಯಲೇಬೇಕು. ಅದು ಕರ್ಮದ ಅನಿವಾರ್ಯತೆ. ಸಮಾಜ ದಿಂದಲೇ ಗಳಿಸಿ, ಜೀವನ ನಿರ್ವಹಣೆಯನ್ನು ಪೂರೈಸಿ ಉಳಿದ ಧನ, ಜ್ಞಾನ ಸಂಪತ್ತನ್ನು ಸಮಾಜದ ಹಿತವನ್ನು ಸಾಧಿಸುವ ಸಲುವಾಗಿ ದುಡಿಯುವುದು ಕರ್ಮದ ಆವಶ್ಯಕತೆ. ಇನ್ನು ದೀನ ದುರ್ಬಲ ಜನರನ್ನು ದೋಚಿ ಆ ದುಡ್ಡಿನ ದುರ್ನಾತಕ್ಕೆ ದಾರಿತಪ್ಪಿ, ದುರ್ವ್ಯಸನ ಗಳಿಂದ ದುಷ್ಟರಾಗಿ, ನಾನಾ ಚಟಗಳಿಂದ ಆ ಸಂಪತ್ತನ್ನು ಮರಳಿ ಅದೇ ಸಮಾಜದಲ್ಲಿ ಅಂಧರಾಗಿ ತಂದು ಸುರಿಯುವುದು. ಇದು ತನಗೂ ಇತರರಿಗೂ ಅಪ್ರಯೋಜಕ ಅಂಧ ದುಡಿಮೆ.

ಈ ಮೂರು ಹಂತಗಳನ್ನೂ ಮೀರಿ ನಿಂತ ಸ್ಥಿತಿ ಇವರದು. ಹತ್ತು ತಲೆಮಾರು ಕೂತು ತಿಂದರೂ ಕರಗದ ಸಂಪತ್ತು. ಅನಿವಾರ್ಯತೆ ಯಂತೂ ಇಲ್ಲ. ಸಮಸ್ತ ಇಂದ್ರಿಯ ಸಾಮರ್ಥ್ಯವನ್ನು ಸಮಾಜಕ್ಕೆ ಧಾರೆ ಎರೆದು, ಮಳೆಯು ಸುರಿಸಿದ ಬಿಳಿ ಮೋಡದಂತೆ ಆವಶ್ಯಕತೆ ಯನ್ನು ಪೂರೈಸಿ ಆಗಿದೆ. ಇನ್ನು ಇವರ ಕಣ್ಣು ಕುಕ್ಕುವ ಜ್ಞಾನಪ್ರಕಾಶದ ಪ್ರಖರತೆಗೆ ಅಂಧತ್ವವೇ ಅಂಧವಾಗಿ ಅಂಧಾದುಂದ ಓಡಬೇಕು. ಹೀಗಿದ್ದೂ ಈ ಇಳಿವಯಸ್ಸಿನಲ್ಲಿ ಅಸಹಾಯಕ ಸ್ಥಿತಿಯಲ್ಲಿ ಕೋರ್ಟಿಗೆ ಬರಲು ಕಾರಣವೇನು? ಎಂಬ ಪ್ರಶ್ನೆ ಕಾಡುತ್ತಲೇ ಇತ್ತು.

ಒಂದು ದಿನ ನ್ಯಾಯಾಂಗಣದಲ್ಲಿ ನನ್ನ ಕೇಸಿಗಾಗಿ ಕಾಯುತ್ತಾ ಕುಳಿತಿದ್ದೆ. ಪಕ್ಕದಲ್ಲಿದ್ದ ವಕೀಲರ ವಾದ ನಡೆಯುತ್ತಿತ್ತು. ಬೆನ್ನ ಹಿಂದೆ ಯಾರೋ ನಿಂತ ಭಾಸವಾಗಿ ತಿರುಗಿ ನೋಡಿದೆ. ಇವರು ನಿಂತಿದ್ದರು. ಕುರ್ಚಿಯನ್ನು ಅವರಿಗೆ ತೆರವು ಮಾಡಿಕೊಟ್ಟು ನಿಂತೆ.

ಪಕ್ಕದ ವಕೀಲರ ವಾದ ಮುಗಿದ ನಂತರ ಇವರು ಪ್ರಾರಂಭಿ ಸಿದರು. ವಾದವಿವಾದಗಳು ನಡೆದು ಕೆಲವು ಕಾನೂನಿನ ಪುಸ್ತಕಗಳನ್ನು ಓದಬೇಕಾಗಿ ಬಂದಿತು. ಕತ್ತಿನಲ್ಲಿ ಸರಮಾಲೆಯಂತಿದ್ದ ಎರಡು ಮೂರು ಕನ್ನಡಕಗಳನ್ನು ಒಂದರ ಮೇಲೊಂದರಂತೆ ಬದಲಾಯಿ ಸುತ್ತಾ ಓದಲು ಬಹಳ ಕಷ್ಟಪಡುತ್ತಿದ್ದರು. ಪಕ್ಕದಲ್ಲಿದ್ದ ನನಗೆ ಓದಬೇಕೆನಿಸಿದರೂ ಹೇಳುವ ಧೈರ್ಯವಿರಲಿಲ್ಲ. ನನ್ನ ಕಸಿವಿಸಿಯನ್ನು ಗಮನಿಸಿ ಮೇಜನ್ನು ಮುಂದೆ ದೂಡಿ "ಓದು" ಎಂದರು. ಕಟ್ಟಿದ ಉಸಿರು ಬಿಟ್ಟಂತೆ ನಿರಾತಂಕವಾಗಿ ಉಸಿರಾಡಿದೆ. ಓದಬೇಕಾದ ಸಮಸ್ತ ದಾಖಲೆಗಳನ್ನು ಓದಿ ಮುಗಿಸಿದೆ. ಅಷ್ಟರಲ್ಲಿ ಉಪಾಹಾರದ ಬಿಡುವಾದ್ದರಿಂದ ನ್ಯಾಯಾಧೀಶರು ಎದ್ದು ಹೋದರು.

ಅವರ ಪರಿಸ್ಥಿತಿಯನ್ನು ಕಂಡು, ನನ್ನಲ್ಲಿದ್ದ ಎಲ್ಲ ಧೈರ್ಯವನ್ನೂ

ಒಟ್ಟುಗೂಡಿಸಿ ಕೇಳಿಯೇಬಿಟ್ಟೆ. "ಸಾರ್, ತಮ್ಮ ಮಕ್ಕಳು, ಮೊಮ್ಮಕ್ಕಳು ಸಮರ್ಥ ಹಾಗೂ ಸಾಕಷ್ಟು ಅನುಭವಶಾಲಿ ವಕೀಲರು ಅಲ್ಲವೇ?"

ಅದಕ್ಕವರು ತಮ್ಮ ಅಲುಗಾಡುತ್ತಿದ್ದ ತಲೆಯನ್ನು ನನ್ನೆಡೆಗೆ ತಿರುಗಿಸಿ ನೋಡಿದ ರಭಸಕ್ಕೆ ನಾನೇಕಾದರೂ ಇವರನ್ನು ಪ್ರಶ್ನಿಸುವ ಸಾಹಸ ಮಾಡಿದೆನೋ ಎನಿಸಿ ಹೆದರಿಕೆಯಿಂದ ಎದೆ ನಡುಗಿ ಗಂಟಲೊಣಗಿ ಹಣೆಯ ಮೇಲೆ ಬೆವರ ಹನಿಗಳು ಮೂಡತೊಡಗಿದವು. ಒಂದು ಕ್ಷಣ ತಡೆದು ದಿಟ್ಟಿಸಿನೋಡಿ ತಮ್ಮ ಬಲಗೈಯಲ್ಲಿನ ಊರುಗೋಲನ್ನು ಎಡಗೈಯಿಗೆ ವರ್ಗಾಯಿಸಿಕೊಂಡು ಇಡೀ ಹಸ್ತವನ್ನು ನನ್ನ ತಲೆಯ ಮೇಲೆ ಇರಿಸಿ ಬಲವಾಗಿ ಅಲುಗಾಡಿಸಿ ತಮ್ಮ ಗುರುವಿನ ಜೀವನ ಘಟನೆಯೊಂದನ್ನು ಹೇಳಿದರು:

ಅವರ ಗುರುಗಳೊಬ್ಬರು ತಮ್ಮ ಗುರುದರ್ಶನಾರ್ಥವಾಗಿ ಶೃಂಗೇರಿಗೆ ಹೋದರಂತೆ. ಆಗ ಗುರುಗಳು ಸನ್ನಿಧಾನದಲ್ಲಿ ಇರಲಿಲ್ಲ. ಅದಕ್ಕೆ ಅವರು ತುಂಗಾ ನದಿಯಲ್ಲಿ ಸ್ನಾನ ಮಾಡಿ ಸಂಧ್ಯಾವಂದನೆಗೆ ಕುಳಿತುಬಿಟ್ಟರು. ಎರಡು ದಿನ ಕಳೆದು ಹೋದವು. ಮೂರನೇ ದಿನ ಸಂಜೆ ಗುರುಗಳ ಆಗಮನವಾಯಿತು. ದರ್ಶನಾರ್ಥವಾಗಿ ವಕೀಲರು ಊರಿನಿಂದ ಬಂದು ಕಾದಿರುವ ಸುದ್ದಿ ಗುರುಗಳಿಗೆ ತಲುಪಿತು. ಕೂಡಲೇ ಗುರುಗಳು ಸಿಟ್ಟಿನಿಂದ ಬುಸುಗುಟ್ಟುತ್ತಾ, "ಮೊದಲು ಆ ಅಯೋಗ್ಯನನ್ನು ಒದ್ದು ಹೊರಹಾಕಿ. ಅವನಿಗೆ ಒಂದು ಹನಿ ನೀರನ್ನೂ ಕೊಡಬೇಡಿ. ನನ್ನ ದೇವರು ಮಾತೆ ಮಗುವಿನ ರೂಪದಲ್ಲಿ ಮೂರು ದಿನಗಳಿಂದ ಅನ್ನ, ಆಹಾರವಿಲ್ಲದೆ ಇವನ ಬಾಗಿಲನ್ನು ಕಾಯುತ್ತಿದ್ದರೆ, ಇವನು ನನ್ನ ಬಾಗಿಲಿನಲ್ಲಿ ಮೂಗು ಹಿಡಿದು ಕುಳಿತಿದ್ದಾನೆ. ಭ್ರಷ್ಟಾ!" ಎಂದು ಸಿಡುಕುತ್ತಾ ತಮ್ಮ ಕೋಣೆಯನ್ನು ಸೇರಿಬಿಟ್ಟರು.

ತುಂಗಾ ತೀರದಲ್ಲಿದ್ದ ವಕೀಲರ ಕಿವಿಗೆ ಸುದ್ದಿ ಮುಟ್ಟಿತು. ಕೋರ್ಟಿನ ಆಜ್ಞೆಯನ್ನೂ ಗುರುವಿನ ಆಜ್ಞೆಯನ್ನೂ ಮೀರಲಾದೀತೆ? ಕೂಡಲೇ ಮೇಲೆದ್ದ ವಕೀಲರು ತಮ್ಮ ಗುರುಗಳಿಗೆ, ತುಂಗಾ ತೀರದಿಂದಲೇ ದೀರ್ಘದಂಡ ಸಾಷ್ಟಾಂಗ ನಮಸ್ಕಾರ ಮಾಡಿ, ಉಟ್ಟ ಉಡುಗೆಯಲ್ಲಿಯೇ ಊರಿಗೆ ಹಿಂದಿರುಗಿದರು. ಕೈ ಚೀಲವನ್ನು ತರಲು ಸಹಾ ಮಠಕ್ಕೆ ಹೋಗಲಿಲ್ಲ.

ಮನೆಯ ಮುಂಬಾಗಿಲಿಗೆ ಬರುತ್ತಿದ್ದಂತೆಯೇ, ಮಡಿಲಲ್ಲಿ ಮಗು ಹೊತ್ತ ವಿಧವೆಯೋರ್ವಳು ದುಃಖತಪ್ತ ಕಣ್ಣೀರಿನಿಂದ ಗದ್ಗದವಾಗಿ ಅಳುತ್ತಾ ಅವರನ್ನು ಸ್ವಾಗತಿಸಿದಳು. ಅವಳ ಮನೆಯ ಮಾಲೀಕ ಗಂಡ ಸತ್ತ ೧೫ ದಿನಗಳಲ್ಲಿ ಅವಳಿಗೆ ಸಲ್ಲಬೇಕಾಗಿದ್ದ ಹಣವನ್ನೂ ಕೊಡದೆ ಮನೆಯಿಂದ ಹೊರಹಾಕಿದ್ದ. ಅವರು ಶೃಂಗೇರಿಗೆ ಹೋದ ರಾತ್ರಿಯೇ ಅವಳು ಅವರ ಸಹಾಯಕ್ಕಾಗಿ ಬಂದು ಕಾದು ಕುಳಿತಿದ್ದಳು.

ಅಂದೇ ಕೊನೆ. ಮತ್ತೆಂದಿಗೂ ಅವರು ಗುರುಗಳಿಂದ ಕರೆ ಬಾರದೆ ಶೃಂಗೇರಿಗೆ ಹೋಗಲಿಲ್ಲ. ಅಷ್ಟೇ ಅಲ್ಲ, ಬೇರೆ ತೀರ್ಥಯಾತ್ರೆಗಳನ್ನೂ ನಿಲ್ಲಿಸಿಬಿಟ್ಟು ಕಾರ್ಯತತ್ಪರರಾದರು.

ಹೀಗೆ ಕಥೆಯನ್ನು ಮುಗಿಸುತ್ತಾ, "ಕರ್ಮಯೋಗವೆಂದರೆ ಹುಡುಗಾಟವೇ ಹುಡುಗಿ" ಎಂದು ವಾತ್ಸಲ್ಯಭರಿತವಾಗಿ ಮತ್ತೊಮ್ಮೆ ನನ್ನ ತಲೆಯನ್ನು ಆಡಿಸಿ, ತಮ್ಮ ಎಡಗೈಯಲ್ಲಿದ್ದ ಊರುಗೋಲನ್ನು ಬಲಗೈಗೆ ವರ್ಗಾಯಿಸಿಕೊಂಡು "ನೀನು ಈವತ್ತು ಪುಸ್ತಕಗಳನ್ನು ಓದಿದ್ದಕ್ಕೆ ಇದೇ ಫೀಸು" ಎಂದು ನಗುತ್ತಾ ಮುನ್ನಡೆದರು.

ಕಥೆಯನ್ನೇ ಹಿಂಬಾಲಿಸಿದ ಮನಸ್ಸು ಮರಳಿ ಮೈತಳೆದು ಎಚ್ಚೆತ್ತು ನೋಡಿದಾಗ ಇಡೀ ನ್ಯಾಯಾಂಗಣ ಬರಿದಾಗಿತ್ತು. ನಾನೊಬ್ಬಳಲ್ಲದೆ ಮತ್ಯಾರೂ ಅಲ್ಲಿರಲಿಲ್ಲ. ನಾನು ಆ ದಿನ ಓದಿದ ಕೆಲವು ಪುಟಗಳು ಕಾಲಗರ್ಭದಲ್ಲಿ ವಿಲೀನವಾಗಿ ಹೋದರೂ ಅವರಿತ್ತ ಫೀಸು ಆಜೀವನ, ನನ್ನ ಕಾರ್ಯಕ್ಷೇತ್ರವನ್ನೆಲ್ಲಾ ಮಹತ್ತರವಾದ ಬೆಳಕಿನಿಂದ ಸಂಪೂರ್ಣವಾಗಿ ವ್ಯಾಪಿಸಿಬಿಟ್ಟಿತು. **ಕುರ್ವನ್ನೇವೇಹ ಕರ್ಮಾಣಿ ಜಿಜೀವಿಶೇತ್ ಶತಂ ಸಮಾಃ** (ಇಲ್ಲಿ ಕರ್ಮವನ್ನೇ ಮಾಡುತ್ತ ನೂರು ವರ್ಷ ಬಾಳಲು ಇಚ್ಛಿಸಬೇಕು) —ಎಂಬ ಶ್ರುತಿವಾಕ್ಯವು ಜೀವದುಂಬಿ ಕಣ್ಣ ಮುಂದೆ ಓಡಾಡುತ್ತಿರುವಂತೆ ಕಂಡಿತು. ಮನದ ಅನುಮಾನವು ಹುಚ್ಚು ಹೊಳೆಗೆ ಕೊಚ್ಚಿಹೋದ ಹುಲ್ಲುಕಡ್ಡಿಯಂತೆ ಮಾಯವಾಗಿತ್ತು.

ಕಕ್ಷಿಗಾರನು ಕೇಸಿನ ಕಾಗದಗಳನ್ನು ಕೈಗಿತ್ತ ಕೂಡಲೇ ಅದರ ಮೇಲೆ ಕಣ್ಣಾಡಿಸಿ, ಅಕ್ಷರಗಳ ಮುಖಾಂತರ ಆಳಕ್ಕೆ ಇಳಿದು ಕಾರ್ಯ ನಡೆದಿರಬಹುದಾದ ಘಟನೆಯ ಕಾರಣದತನಕ ಬುದ್ಧಿಯ ಮೂಲಕ ತಲುಪುವಂತೆ, ಪ್ರಕೃತಿ ಹಾಳೆಯಲ್ಲಿ ಮೂಡಿದ ವಸ್ತು ವಿಷಯ ಜೀವಜಂತುಗಳ ಮುಖಾಂತರ ಆಳಕ್ಕೆ ಇಳಿದು, ತೋರುವ ಕಾರ್ಯದ ಹಿಂದಿರಬಹುದಾದ ಕಾರಣಕರ್ತನನ್ನು ತನ್ನ ಕೃತಿಯಲ್ಲಿ ಕಾಣುವುದೇ ಕರ್ಮಯೋಗ.

ಇದಾದ ಕೆಲವು ಕಾಲದ ನಂತರ ನ್ಯಾಯಾಂಗಣದಲ್ಲಿಯೇ ವಾದಿಸುತ್ತಾ ಕುರ್ಚಿಯ ಮೇಲೆ ಕುಸಿದು ಕೊನೆಯುಸಿರೆಳೆದರು, ಆ ಮಹಾತ್ಮರು. "ಹೃದ್‌ಗ್ರಂಥಿ"ಯ ಕೊಂಡಿ ಕಳಚಿ, ಪಂಚಭೂತ ಪಂಜರದ ಬಂಧನದಿಂದ ಬಿಡುಗಡೆ ಹೊಂದಿದ ಪ್ರಾಣಪಕ್ಷಿ ಚೇತನದ ಅನಂತತೆಯಲ್ಲಿ ಸ್ವತಂತ್ರವಾಗಿ ಹಾರಿಹೋಯಿತು.

ಈ ಮಹಾನ್ ಕರ್ಮಯೋಗಿ ಯಾರು ಗೊತ್ತೆ? ರಿಟ್ ಐಯ್ಯಂಗಾರಿ, ಫೈರ್‌ಬ್ರಾಂಡ್, ಎಸ್.ಕೆ.ವಿ., ವಕೀಲ ಭೀಷ್ಮ, ಎಂಬೆಲ್ಲಾ ಹೆಸರುಗಳಿಂದ ಪ್ರಖ್ಯಾತಿ ಪಡೆದಿದ್ದ ದಿವಂಗತ ಶ್ರೀ ಎಸ್.ಕೆ. ವೆಂಕಟರಂಗ ಐಯ್ಯಂಗಾರ್.

ಕರ್ಮಯೋಗ ಉಪದೇಶದ ಒಟ್ಟು ಸಾರಾಂಶವೇನೆಂದರೆ : ನೀನು ಸ್ವಾಮಿಯಂತೆ ಕರ್ಮ ಮಾಡು, ಗುಲಾಮನಂತೆ ಮಾಡಬೇಡ. ಅನವರತವೂ ಕರ್ಮ ಮಾಡು, ಆದರೆ ಜೀತಗಾರನಂತೆ ದುಡಿಯದಿರು. – ಸ್ವಾಮಿ ವಿವೇಕಾನಂದ